ಕ್ರ. ಸಂ.	ಯೋಜನೆಗಳು	ಇದುವರೆವಿಗೂ ಬಿಡುಗಡೆಯಾಗಿರುವ ಮೊತ್ತ
		(ರೂ. ಲಕ್ಷಗಳಲ್ಲಿ)
54.	ಪೂರಿಗಾಲಿ ಎಲ್.ಐ.ಎಸ್.	4.50
55.	ನುಗು ಎಲ್.ಐ.ಎಸ್	10.00
56.	ಕರೆಗೊಡು ಎಲ್.ಐ.ಎಸ್.	8.00
57.	ಇಂಪ್ರೂಮೆಂಟ್ ಟು ಬಿ.ಜೆ.ಪುರ	10.00
58.	ಚಂದ್ರಹಳ್ಳಿ ಟ್ಯಾಂಕ್	7.00
59.	ಇಂಪ್ರೂಮೆಂಟ್ಸ್ ಟು ಅಚ್ಚುಕಟ್ಟು	15.00
	ಒಟ್ಟು	11899.29

ಶಿವಮೊಗ್ಗ ಕೃಷಿ ಮಾರುಕಟ್ಟೆಯಿಂದ ರಸ್ತೆಗಳ ಅಭಿವೃದ್ಧಿ

1837(2129): ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ): ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಶಿವಮೊಗ್ಗ ಕೃಷಿ ಮಾರುಕಟ್ಟೆಯಿಂದ ಬರುತ್ತಿರುವ ಆದಾಯದಿಂದ ನಗರ ಹಾಗೂ ಗ್ರಾಮಾಂತರ ರಸ್ತೆಗಳ ಅಭಿವೃದ್ಧಿಗೆ ಹಣ ಒದಗಿಸಲಾಗಿದೆಯೆ;

ಆ. ಒದಗಿಸಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಪಟ್ಟಣ ಹಾಗೂ ಗ್ರಾಮಗಳಿಗೆ ಒದಗಿಸಲಾಗಿದೆ; ವಿವರ ನೀಡುವುದು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) ಕೃಷಿ ಮಾರುಕಟ್ಟೆ ಸಚಿವರು

ಅ. ಹೌದು

ಆ. ಮಾರುಕಟ್ಟೆ ಸಮಿತಿಯ ನಿಧಿಯಿಂದ ಸಂಪರ್ಕ ರಸ್ತೆ ಕಲ್ಪಿಸುವುದಕ್ಕಾಗಿ 31.01.2001ರಿಂದ ಜಾರಿಗೆ ಬರುವಂತೆ ನಿಯಮಾವಳಿಗಳನ್ನು ರಚಿಸಲಾಗಿದೆ. ಇದರ ಮೇರೆಗೆ 2001-02ರಲ್ಲಿ ರೂ. 30.00 ಲಕ್ಷಗಳ ಮೆಚ್ಚದಲ್ಲಿ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಂಡಿದೆ. ವಿವರ ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

2001-02ನೇ ಸಾಲಿನಲ್ಲಿ ಶಿವಮೊಗ್ಗ ಸಮಿತಿಯಿಂದ ಕೈಗೊಂಡ ರಸ್ತೆ ಅಭಿವೃದ್ಧಿ ಕಾಮಗಾರಿ ವಿವರ

ಕ್ರಮ ಸಂಖ್ಯೆ	ರಸ್ತೆಯ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
	ತೀರ್ಥಹಳ್ಳಿ ತಾಲ್ಲೂಕು	
1.	ನೆರಟೂರು ಅರಿವಿಳಿಕೆ ಹೊನ್ನಾನಿರಸ್ತೆ	0.75
2.	ಹುಣಸವಳ್ಳಿ ಗೆರೆಸಾ ಅಭಿವೃದ್ಧಿ	1.75
	ಶಿವಮೊಗ್ಗ ತಾಲ್ಲೂಕು	

1.	ಹರಮಘಟ್ಟದಿಂದ ಜಮೀನಿಗೆ ಹೋಗುವ ಹೈಸ್ಕೂಲ್ ಹಿಂಭಾಗದ ರಸ್ತೆ	1.00
2.	ಹರನಘಟ್ಟದಿಂದ ಸುತ್ತುಕಟ್ಟೆಗೆ ಹೋಗುವ ರಸ್ತೆ	0.75
3.	ಆಯನೂರು ಬಿ.ಹೆಚ್.ರಸ್ತೆ ಫಾರೆಸ್ಟ್ ಆಫೀಸ್ ಪಕ್ಕದಿಂದ ಜಮೀನುಗಳಿಗೆ ಸಿದ್ದಾಪುರದ ಕಡೆಗೆ ಹೋಗುವ ರಸ್ತೆ	1.75
4.	ಆಯನೂರು ದ್ಯಾವನಕೆರೆ ರಸ್ತೆಯ ಎಡಭಾಗದ ಜಮೀನುಗಳಿಗೆ ಹೋಗುವ ರಸ್ತೆ	0.75
5.	ಆಯನೂರು ಕೋಟೆ ಹೊಸಕೊಟ್ಟಿ ದುರ್ಗಮ್ಮ ದೇವಸ್ಥಾನದ ಮುಖಾಂತರ ಜಮೀನುಗಳಿಗೆ ಹೋಗುವ ರಸ್ತೆ	0.75
6.	ಆಯನೂರು ಕೋಟೆ ಹೊಸಕೊಟ್ಟಿ ದುರ್ಗಮ್ಮ ದೇವಸ್ಥಾನದ ಮುಖಾಂತರ ಜಮೀನುಗಳಿಗೆ ಹೋಗುವ ರಸ್ತೆ	0.75
7.	ಸಿಂಗನಹಳ್ಳಿಯಿಂದ ಮಂಡಘಟ್ಟ ರಸ್ತೆ ಅಭಿವೃದ್ಧಿ	0.75
8.	ಅನುಪಿನಕಟ್ಟೆ ಬಳಸಿ ಕೆರೆಏರಿ ರಸ್ತೆ	1.75
9.	ತುಂಗಾ ಬಲನಾಲೆಯ 20ನೇ ಕಿ.ಮೀ. ಸೇತುವೆಯಿಂದ ಸೂಳೆಬೈಲು ಗ್ರಾಮಕ್ಕೆ ಸೇರುವ ರಸ್ತೆ	1.00
10.	ಮತ್ತೂರು ರಸ್ತೆಯಿಂದ ತುಂಗಾ ಬಲನಾಲೆ 20 ಕಿಮೀ.ಗೆ ಸೇರುವ ರಸ್ತೆ	4.00
11.	ಮಡಿಕೆ ಚೀಲೂರು ಹಳೇ ಗ್ರಾಮದಿಂದ ಹಾಡೋನಹಳ್ಳಿಗೆ ಸೇರುವ ರಸ್ತೆ	1.00
12.	ಕ್ಯಾತಿನಕೊಪ್ಪದಿಂದ ಗವಿಗುಡ್ಡಕ್ಕೆ ಹೋಗುವ ರಸ್ತೆ	1.00
13.	ಬಿ.ಹೆಚ್. ರಸ್ತೆಯಿಂದ ವೀರಭದ್ರಸ್ವಾಮಿ ದೇವಸ್ಥಾನ ಮುಖಾಂತರ ಜಮೀನುಗಳಿಗೆ ಹೋಗುವ ರಸ್ತೆ	0.50
14.	ಆಯನೂರು ಕೋಟೆ ಹುಂಡಕ್ಕಿಬೀಸೂರು ರಸ್ತೆಯಿಂದ ಜಮೀನುಗಳಿಗೆ ಹೋಗುವ ರಸ್ತೆ	0.50
15.	ಆಯನೂರು ಕೋಟೆ ಸೇವಾಲಾಲ್ ದೇವಸ್ಥಾನದ ಮುಖಾಂತ ಜಮೀನುಗಲಿಗೆ ಹೋಗುವ ರಸ್ತೆ	0.75
16.	ಅಗಸಿನಕಟ್ಟೆ ಕೆರೆ ಏರಿಯಿಂದ ಮತ್ತು ರೈತರ ಜಮೀನಿನಿಂದ ಕ್ಷತ್ರಿಯ ಕೇರಿಗೆ ಸೇರುವ ರಸ್ತೆ	1.00
17.	ಇಟ್ಟಿಗೆಹಳ್ಳಿಯಿಂದ ಗೌಡನಕೆರೆಗೆ ಸೇರುವ ರಸ್ತೆ	1.00
18.	ಹೊಳಲೂರು ಸಂತೆ ಮೈದಾನ ಪಕ್ಕದಿಂದ ರಾಷ್ಟ್ರೀಯ ಹೆದ್ದಾರಿಗೆ ಸೇರುವ ರಸ್ತೆ ಅಭಿವೃದ್ಧಿ	0.75
19.	ಅಂಧರ ಶಾಲೆಯಿಂದ ಅನುಪಿನಕಟ್ಟೆ ಮತ್ತು ಹನುಮಂತಾಪುರ ರಸ್ತೆ ಅಭಿವೃದ್ಧಿ	1.75

20.	ಬಿ.ಹೆಚ್.ರಸ್ತೆ ಬೈಪಾಸ್‌ನಿಂದ ಪಡ್ಡಿನಕೊಪ್ಪ ಕೆರೆ ಏರಿವರೆಗಿನ ಬಂಡಿದಾರಿ ಅಭಿವೃದ್ಧಿ	4.00
21.	ಮತ್ತೂರು ಮುಖ್ಯರಸ್ತೆಯ ಎಡಭಾಗದಲ್ಲಿ ತುಂಗಾ ಬಲನಾಲೆಗೆ ಹೋಗುವ ರಸ್ತೆ	0.50
22.	ಭೂತಪ್ಪನ ಗುಡಿಯಿಂದ ಜಮೀನಿನ ರಸ್ತೆ	1.75
	ಒಟ್ಟು	30.00

ಅಡಿಕೆ ಬೆಳೆಯನ್ನು ತೋಟಗಾರಿಕೆ ಬೆಳೆ ಎಂದು ಪರಿಗಣಿಸುವುದು

1838(2130): ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ): ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಬೆಳೆಯುವ ಅಡಿಕೆ ಬೆಳೆಯನ್ನು ತೋಟಗಾರಿಕೆ ಬೆಳೆ ಎಂದು ಪರಿಗಣಿಸಲಾಗಿದೆಯೇ;

ಆ. ಇಲ್ಲದೇ ಇದ್ದಲ್ಲಿ ಇದನ್ನು ತೋಟಗಾರಿಕೆ ಬೆಳೆ ಎಂದು ಪರಿಗಣಿಸಲು, ಸರ್ಕಾರದ ಮಟ್ಟದಲ್ಲಿ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ;

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) ಕೃಷಿ ಮಾರುಕಟ್ಟೆ ಸಚಿವರು

ಅ. ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಅಧಿನಿಯಮ, 1966ರ ಅನುಸೂಚಿ VIII ರನ್ವಯ ಮತ್ತು ರಿಟ್ ಅಪೀಲು ಸಂ: 639/98 ಮತ್ತು ಇತರ ಅರ್ಜಿಗಳಲ್ಲಿ ಮಾನ್ಯ ರಾಜ್ಯ ಉಚ್ಚನ್ಯಾಯಾಲಯವು ನೀಡಿರುವ ತೀರ್ಪಿನನುಸಾರ ಅಡಿಕೆಯನ್ನು ಪ್ಲಾಂಟೇಷನ್ ಬೆಳೆ ಎಂದು ಪರಿಗಣಿಸಲಾಗಿದೆ.

ಆ. ಉದ್ಭವಿಸುವುದಿಲ್ಲ.

ಹಿಪ್ಪರಗಿ ಬ್ಯಾರೇಜ್ ಕುರಿತು

1839(2348): ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್: ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಿಪ್ಪರಗಿ ಬ್ಯಾರೇಜ್ ಕ್ರೆಸ್ಟ್‌ಗೇಟ್‌ಗಳನ್ನು ಅಳವಡಿಸಿ ನೀರು ಸಂಗ್ರಹಣೆ ಕಾರ್ಯ ಯಾವಾಗ ಪ್ರಾರಂಭಿಸಲಾಗುವುದು:

ಆ. ಕರಿಮಸೂತಿ-ಸಾವಳಗಿ ಏತ ನೀರಾವರಿ ಯೋಜನೆ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಯಾವಾಗ ಸಲ್ಲಿಸಲಾಯಿತು.

ಇ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯದರ್ಶಿಯವರಿಂದ ನೀರಾವರಿ ನಿಗಮಕ್ಕೆ ಯಾವಾಗ ಪ್ರಸ್ತಾವನೆ ಸಲ್ಲಿಸಲಾಯಿತು.

ಈ. ತಾಂತ್ರಿಕ ಹಾಗೂ ಆಡಳಿತಾತ್ಮಕ ಅನುಮೋದನೆ ಯಾವಾಗ ಆಯಿತು.

ಉ. ಸದರಿ ಯೋಜನೆಯ ಕಾರ್ಯವನ್ನು ಯಾವಾಗ ಪೂರ್ಣಗೊಳಿಸುವುದು.

ಊ. ಈ ಯೋಜನೆಯಿಂದ ಬರಗಾಲ ಪೀಡಿತ ಎಷ್ಟು ಹಳ್ಳಿಗಳ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಸಿಗುತ್ತದೆ ಈ ಬಗ್ಗೆ ಟೆಂಡರ್ ಕರೆಯುವುದು ಯಾವ ಹಂತದಲ್ಲಿದೆ ಹಾಗಾದರೆ ಈ ಕೆಲಸ ಯಾವಾಗ ಪ್ರಾರಂಭಗೊಳ್ಳುವುದು?